**ಅಸಲು ದಾವೆ ಸಂಖ್ಯೆ -58/2023**
**ಪಿ.ಡಬ್ಲ್ಯೂ-1**

**<u>ದಿನಾಂಕ 10-06-2025 ರಂದು ಸಾಕ್ಷಿಯವರಿಗೆ  ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಪಾಟೀ ಸವಾಲು : ಶ್ರೀ.ಎಸ್.ಪಿ.ವಿ ವಕೀಲರಿಂದ ಪ್ರತಿವಾದಿ-1 ಪರವಾಗಿ</u>**

1. ಸದರಿ ದಾವೆಯನ್ನು ನಾನು ಶ್ರೀಕಾಂತ ಅವರ ವಿರುದ್ದ ಮಾತ್ರ ಸಲ್ಲಿಸಿರುತ್ತೇನೆ. ನೀವು ಮತ್ತು ನಿಮ್ಮ ಮಗ 2 ನೇ ಪ್ರತಿವಾದಿ ಕೂಡಿಯೇ ವಾಸಿಸುತ್ತೀರಿ ಎಂದರೆ ಸರಿ. ನನ್ನ ಮಗ 2 ನೇ ಪ್ರತಿವಾದಿ ಚೆನ್ನೈನಲ್ಲಿ ವಾಸಿಸುತ್ತಾನೆ. ನಿಮ್ಮ ಮತ್ತು 2 ನೇ ಪ್ರತಿವಾದಿ ನಡುವೆ ಬಾಂಧವ್ಯ ಸರಿ ಇದೆ ಎಂದರೆ ಸರಿ. ಈ ದಾವೆಯನ್ನು ನೀವು ಮತ್ತು 2 ನೇ ಪ್ರತಿವಾದಿ ಸೇರಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮನೆತನದ ಮೂಲ ಪುರುಷ ನಿಮ್ಮ ತಂದೆ ಬಸಪ್ಪ ಮತ್ತು ನಿಮ್ಮ ತಾಯಿ ತಿಪ್ಪವ್ವ ಇವರು ತೀರಿಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ತಂದೆ-ತಾಯಿಯವರಿಗೆ 3 ಜನ ಮಕ್ಕಳು ಅವರೆಂದರೆ ಮಹಾದೇವಪ್ಪ, ನೀವು ಮತ್ತು ಗಂಗವ್ವ ಎಂದರೆ ಸರಿ. ಮಹಾದೇವ ಇವರ ಹೆಂಡತಿ ಗೌರವ್ವ ತೀರಿಕೊಂಡಿದ್ದು, ಅವರಿಗೆ 1 ನೇ ಪ್ರತಿವಾದಿ ತಿಪ್ಪವ್ವ ಮತ್ತು ಶೋಭಾ ಎಂಬ ಮಕ್ಕಳು ಎಂದರೆ ಸರಿ. ಮಹಾದೇವಪ್ಪ ಅವರು ತೀರಿಕೊಂಡ ನಂತರ ಮನೆತನದ ಎಲ್ಲಾ ವ್ಯವಹಾರಗಳನ್ನು ನೀವು ನೋಡಿಕೊಳ್ಳುತ್ತಿದ್ದೀರಿ ಎಂದರೆ ಮಹಾದೇವಪ್ಪ ಅವರ ಮಗ 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಎಂದು ಹೇಳುತ್ತಾರೆ.

2. ಸರ್ವೆ ನಂ.64/3 ರ ಜಮೀನನ್ನು ಬಸಪ್ಪ ನಿಮ್ಮ ತಂದೆ ನಿಮ್ಮ ತಾಯಿಯ ಕಡೆಯಿಂದ ರೂ.700/- ಗಳಿಗೆ ದಿಃ04.04.1958 ರಲ್ಲಿ ಖರೀದಿ ತೆಗೆದುಕೊಂಡರು ಎಂದರೆ ಸರಿ. ನಿಮ್ಮ ತಂದೆ ಬಸಪ್ಪ ಮತ್ತು ಈರಪ್ಪ ಕುರುಬೆಟ್ಟ ಇವರು ಸರ್ವೆ ನಂ.66/5+6+7+8+9 ರ ಜಮೀನನ್ನು ಬೆಣ್ಣೆಪ್ಪ ನಾಗಪ್ಪ ಮಾದರ ಅವರ ಕಡೆಯಿಂದ 1971 ರಲ್ಲಿ ಖರೀದಿಸಿದರು ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಮುಟೇಶನ ಎಂಟ್ರಿ ಸಂಖ್ಯೆ 614 ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಸಿದ ಆಸ್ತಿಯನ್ನು ಬಸಪ್ಪ ಮತ್ತು ಈರಪ್ಪ ವಿಭಾಗ ಮಾಡಿಕೊಂಡರು ಎಂದರೆ ಸರಿ. ಸದರಿ ವಿಭಾಗದಲ್ಲಿ ಖರೀದಿಸಿದ ಆಸ್ತಿಯ ಪಶ್ಚಿಮ ಭಾಗದ 2 ಏಕರೆ 9 ಗುಂಟೆ ನಿಮ್ಮ ತಂದೆ ಬಸಪ್ಪ ಅವರ ಪಾಲಿಗೆ ಮತ್ತು ಪೂರ್ವ ಭಾಗದ 2 ಏಕರೆ 9 ಗುಂಟೆ ಈರಪ್ಪ ಅವರ ಪಾಲಿಗೆ ಬಂದಿತು ಎಂದರೆ ಸರಿ. ಆ ರೀತಿ ವಿಭಾಗ ಮಾಡಿಕೊಂಡ ನಂತರ ಬಸಪ್ಪ ಅವರು ತೀರಿಕೊಂಡರು ಎಂದರೆ ಸರಿ. ಬಸಪ್ಪ ಅವರು ತೀರಿಕೊಂಡ ನಂತರ ನೀವು ಮತ್ತು ನಿಮ್ಮ ಹಿರಿಯ ಸಹೋದರ ಮಹಾದೇವಪ್ಪ ಮತ್ತು ಸಹೋದರಿ ಗಂಗವ್ವ ಅವರ ಹೆಸರು ವಾರಸಾ ನಾತೆಯಿಂದ ದಾಖಲಾಯಿತು ಎಂದರೆ ಸರಿ. ನಿಮ್ಮ ಮತ್ತು ನಿಮ್ಮ ಸಹೋದರ ಮಹಾದೇವಪ್ಪ ಅವರ ಹೆಸರು ಸರ್ವೆ ನಂ.64/3, 66/5+6+7+8+9 ರ ಆಸ್ತಿಗಳಿಗೆ ನಮೂದು ಆಯಿತು ಎಂದರೆ ಸರಿ. ಗಂಗವ್ವ ಅವರು ಸದರಿ 2 ಆಸ್ತಿಗಳಲ್ಲಿನ ತನ್ನ ಹಕ್ಕನ್ನು ನಿಮ್ಮಿಬ್ಬರಿಗೆ ಬಿಟ್ಟುಕೊಟ್ಟರು ಎಂದರೆ ಸರಿ. ಅದರಂತೆ ಮುಟೇಶನ ಎಂಟ್ರಿ ಸಂಖ್ಯೆ 755 ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ.

3. ನಿಮ್ಮ ಸಹೋದರ ಮಹಾದೇವಪ್ಪ ನೀವು ಹಾಗೂ ಸುಭಾಷ ಕುಳ್ಳೊಳ್ಳಿ ಎನ್ನುವವರು 1997 ರಲ್ಲಿ ವಿಭಾಗ ಮಾಡಿಕೊಂಡಿರಿ ಎಂದರೆ ಸರಿಯಲ್ಲ. ಸರ್ವೆ ನಂ.64/3 ರ ಕ್ಷೇತ್ರ 7 ಏಕರೆ 12 ಗುಂಟೆ ಆಸ್ತಿ ನಿಮ್ಮ ಮತ್ತು ಮಹಾದೇವಪ್ಪ ನಡುವೆ ಜಂಟಿಯಾಗಿ ಬಂದಿತ್ತು ಎಂದರೆ ಸರಿ. ಆ ರೀತಿ ವಿಭಾಗ ಆದ 4 ದಿನಗಳ ನಂತರ ನಿಮ್ಮ ಸಹೋದರ ತೀರಿಕೊಂಡರು ಎಂದರೆ ಸರಿ. ಮಹಾದೇವಪ್ಪ ತೀರಿಕೊಂಡ ನಂತರ ಆತನ ಮಕ್ಕಳಾದ 1 ನೇ ಪ್ರತಿವಾದಿ ಶ್ರಿಕಾಂತ, ತಿಪ್ಪವ್ವ ಮತ್ತು ಶೋಭಾ ಅವರ ಹೆಸರು ವಾರಸಾ ನಾತೆಯಿಂದ ದಾಖಲಾಯಿತು ಎಂದರೆ ಸರಿ. ತಿಪ್ಪವ್ವ ಮತ್ತು ಶೋಭಾ ಇವರು ಸರ್ವೆ ನಂ.64/3, 66/5+6+7+8+9 ರ ಆಸ್ತಿಗಳಲ್ಲಿನ ತಮ್ಮ ಹಕ್ಕನ್ನು ಮಹಾದೇವಪ್ಪ ಇವರಿಗೆ ಬಿಟ್ಟುಕೊಟ್ಟರು ಎಂದರೆ ಸರಿ. ಅದರ ಪ್ರಕಾರ ಡೈರಿ ಉತಾರೆ ಆಯಿತು ಎಂದರೆ ಸರಿ.

4. 2001 ರಲ್ಲಿ ಸರ್ವೆ ನಂ.64/3, 66/5+6+7+8+9 ರ ಆಸ್ತಿಗಳಿಗೆ ಸಂಬಂಧಿದಂತೆ ನೀವು ಮತ್ತು 1 ನೇ ಪ್ರತಿವಾದಿ ಶ್ರೀಕಾಂತ ಇವರು ವಿಭಾಗ ಮಾಡಿಕೊಂಡಿರಿ ಎಂದರೆ ಸರಿ. ಸರ್ವೆ ನಂ.64/3

ರಲ್ಲಿ ಉತ್ತರ ಭಾಗದ್ದು 3 ಏಕರೆ 30 ಗುಂಟೆ ಆಸ್ತಿ ಹಾಗೂ ಸರ್ವೆ ನಂ.66/5+6+7+8+9 ರ ಆಸ್ತಿಯಲ್ಲಿನ ಪಶ್ಚಿಮ ಭಾಗದ ಒಂದು ಏಕರೆ 1 ನೇ ಪ್ರತಿವಾದಿ ಶ್ರೀಕಾಂತ ಅವರ ಪಾಲಿಗೆ ಬಂದಿತು ಎಂದರೆ ಸರಿ. ನಿಮ್ಮ ಪಾಲಿಗೆ ಸರ್ವೆ ನಂ.64/3 ರ ದಕ್ಷಿಣ ಭಾಗದ 3 ಏಕರೆ 22 ಗುಂಟೆ ಹಾಗೂ ಸರ್ವೆ ನಂ.66/5+6+7+8+9 ರ ಪೂರ್ವ ಭಾಗದ 1 ಏಕರೆ 9 ಗುಂಟೆ ನಿಮ್ಮ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಆ ಪ್ರಕಾರ ಡೈರಿ ಎಂಟ್ರಿ ಆಯಿತು ಎಂದರೆ ಸರಿ.

5. ಪ್ರತಿವಾದಿ-1 ಶ್ರೀಕಾಂತ ಇವರು ತಮ್ಮ ಪಾಲಿಗೆ ಬಂದ ಸರ್ವೆ ನಂ.66/5+6+7+8+9 ರ ಆಸ್ತಿಯನ್ನು ಗೋವಿಂದಪ್ಪ ಅಪ್ಪಾಸಾಹೇಬ ನಾಯಿಕ ಅವರಿಗೆ ಮಾರಾಟ ಮಾಡಿದ ಎಂದರೆ ಸರಿ. ಆದ್ದರಿಂದ ಸದರಿ ಆಸ್ತಿಯ ಮಾಲೀಕ ಗೋವಿಂದಪ್ಪ ಅವರೇ ಆಗಿದ್ದು, ಅವರೇ ಅದರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಿಮ್ಮ ಪಾಲಿಗೆ ಬಂದ ಸರ್ವೆ ನಂ.64/3 ರ ಕ್ಷೇತ್ರ 3 ಏಕರೆ 22 ಗುಂಟೆ ಆಸ್ತಿಯನ್ನು ನಿಮ್ಮ ಮಗನಿಗೆ ಅಪಸಾತ ವಾಟ್ನಿ ಮೂಲಕ ಬಿಟ್ಟುಕೊಟ್ಟಿರಿ ಎಂದರೆ ಸರಿ. ಪೋಡಿ ಪ್ರಕರಣ ಆಗಿದ್ದು 3 ಏಕರೆ 30 ಗುಂಟೆ ಸರ್ವೆ ನಂ.64/3 ರ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಶ್ರೀಕಾಂತ ಈತನ ಹೆಸರು ನಮೂದು ಆಯಿತು ಎಂದರೆ ಸರಿ. ಸರ್ವೆ ನಂ.64/4 ಕ್ಷೇತ್ರ 3 ಏಕರೆ 22 ಗುಂಟೆ ಆಸ್ತಿಗೆ ನಿಮ್ಮ ಮಗನ ಹೆಸರು ದಾಖಲಾಯಿತು ಎಂದರೆ ಸರಿ. ಸರ್ವೆ ನಂ.66/5+6+7+8+9 ರ ಆಸ್ತಿಯನ್ನು ಈ ಪ್ರಕರಣದಲ್ಲಿ ನೀವು ಸೇರಿಸಿಲ್ಲ ಎಂದರೆ ಸಂಬಂಧ ಇಲ್ಲದ ಕಾರಣ ಸೇರಿಸಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ತನ್ನ ಪಾಲಿಗೆ ಬಂದ ಸರ್ವೆ ನಂ.64/3 ಕ್ಷೇತ್ರ 3 ಏಕರೆ 30 ಗುಂಟೆ ಆಸ್ತಿಯಲ್ಲಿ 1 ಏಕರೆ 30 ಗುಂಟೆ ಆಸ್ತಿಯನ್ನು 3 ನೇ ಪ್ರತಿವಾದಿ ರಾಧಾ ಅವರಿಗೆ ದಿಃ07.02.2022 ರಂದು ಕ್ರಯದಸ್ತು ಬರೆದುಕೊಟ್ಟಿದ್ದಾನೆ ಎಂದರೆ ಸರಿ. 3 ನೇ ಪ್ರತಿವಾದಿಯ ಹೆಸರಿಗೆ ಕ್ರಯ ದಸ್ತು ಆದ ವಿಷಯ ನಿಮಗೆ ಗೊತ್ತಿದ್ದರೂ ಸಹ ಆಕೆಯ ಹೆಸರು ಪಹಣಿ ಪತ್ರಿಕೆಗಳಲ್ಲಿ ನಮೂದು ಆಗಬಾರದು ಎಂದು ತಹಶೀಲ್ದಾರ ಕಚೇರಿಯಲ್ಲಿ ತಕರಾರು ಸಲ್ಲಿಸಿದ್ದೀರಿ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಇಬ್ಬರು ನಿಮ್ಮಿಂದ ಬೇರೆಯಾಗಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ವಿಭಾಗದಲ್ಲಿ ಬಂದ ಸ್ವಾಧೀನಾನುಭವದಲ್ಲಿ ನೀವು ಮತ್ತು 1 ನೇ ಪ್ರತಿವಾದಿ ಪ್ರತ್ಯೇಕವಾಗಿ ಇದ್ದೀರಿ ಎಂದರೆ ಸರಿ.

6. ಸರ್ವೆ ನಂ.39/3 ರ ಆಸ್ತಿಗೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾನೆ ಎಂದು ಭೂ ನ್ಯಾಯ ಮಂಡಳಿ ಬದಾಮಿಯವರು ಆದೇಶ ಮಾಡಿದರು ಎಂದರೆ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಭೂ ನ್ಯಾಯ ಮಂಡಳಿಯವರು ಕೇವಲ 1 ನೇ ಪ್ರತಿವಾದಿ ಮಾತ್ರ

ಸ್ವಾಧೀನದಲ್ಲಿ ಇದ್ದಾನೆ ಎಂದು ಆದೇಶ ಮಾಡಿದ್ದಾರೆ ಎಂದರೆ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ಭೂ ನ್ಯಾಯ ಮಂಡಳಿಯವರು ನಿಮ್ಮ ಪ್ರಕಾರ ನಿಮ್ಮ ಹೆಸರನ್ನು ಆದೇಶದಲ್ಲಿ ನಮೂದಿಸಿದ್ದನ್ನು ನೀವು ನೋಡಿದ್ದೀರಾ ಎಂದರೆ ನೋಡಿಲ್ಲ ಎಂದು ಹೇಳುತ್ತಾರೆ. ಭೂ ನ್ಯಾಯ ಮಂಡಳಿಯವರು ಆದೇಶ ಮಾಡಿದಾಗಿನಿಂದ 1 ನೇ ಪ್ರತಿವಾದಿ ಸರ್ವೆ ನಂ.39/3 ರ ಸ್ವಾಧೀನಾನುಭವದಲ್ಲಿ ಇದ್ದಾನೆ ಎಂದರೆ ಇಬ್ಬರು ಇದ್ದೇವೆ ಎಂದು ಹೇಳುತ್ತಾರೆ.

ಈ ವೇಳೆಗೆ ನ್ಯಾಯಾಲಯದ ಮೊದಲನೇ ಅವಧಿ ಮುಗಿದಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನ 3-00 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ                    ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

**<u>ಸಾಕ್ಷಿಯವರಿಗೆ ಮಧ್ಯಾಹ್ನ 3-00 ಗಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು : ಶ್ರೀ.ಎಸ್.ಪಿ.ವಿ ವಕೀಲರಿಂದ ಪ್ರತಿವಾದಿ-1 ಪರವಾಗಿ</u>**

7. 1998 ರಲ್ಲಿ ನೀವು 1 ನೇ ಪ್ರತಿವಾದಿ ಮತ್ತು ಆತನ ಸಹೋದರಿಯರಾದ ತಿಪ್ಪವ್ವ ಮತ್ತು ಶೋಭಾ ಅವರಿಗೆ ತಿಳಿಗೊಡದೇ ನಿಮ್ಮ ಹೆಸರನ್ನು ಸಹ ಕಂದಾಯ ಇಲಾಖಾ ದಾಖಲಾತಿಗಳಲ್ಲಿ ನಮೂದು ಆಗಲು ಅರ್ಜಿ ಸಲ್ಲಿಸಿದಿರಿ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಾದ ನಂತರ 1 ನೇ ಪ್ರತಿವಾದಿ ಮತ್ತು ಆತನ ಸಹೋದರಿಯರು ಊರಿನ ಹಿರಿಯರನ್ನು ಕೂಡಿಸಿದರು ಎಂದರೆ ಸರಿಯಲ್ಲ. ಊರ ಹಿರಿಯರ ಸಮಕ್ಷಮ ಮಾತುಕತೆ ಆದ ನಂತರ ಶೋಭಾ ಮತ್ತು ತಿಪ್ಪವ್ವ ಇವರು ತಮ್ಮ ಹೆಸರನ್ನು ಸರ್ವೆ ನಂ.39/3 ರ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ಇಲಾಖಾ ದಾಖಲಾತಿಗಳಲ್ಲಿ ಕಡಿಮೆ ಮಾಡಿಕೊಂಡರು ಎಂದರೆ ಸರಿಯಲ್ಲ. ನೀವು ಊರ ಹಿರಿಯರು ಸಮಜಾಯಿಷಿ ಹೇಳಿದರು ಸಹ ನಿಮ್ಮ ಹೆಸರನ್ನು ಕಂದಾಯ ಇಲಾಖಾ ದಾಖಲಾತಿಗಳಲ್ಲಿ ಕಡಿಮೆ ಮಾಡಿಕೊಳ್ಳಲು ಒಪ್ಪದೇ ಅವರೊಂದಿಗೆ ವೈಮನಸ್ಸು ಬೆಳಸಿಕೊಂಡಿರಿ ಎಂದರೆ ಸರಿಯಲ್ಲ. ಸರ್ವೆ ನಂ.39/3 ರ ಆಸ್ತಿ 1 ನೇ ಪ್ರತಿವಾದಿ ಶ್ರೀಕಾಂತ ಈತನ ಸಂಪೂರ್ಣ ಮಾಲೀಕತ್ವದ ಆಸ್ತಿ ಎಂದು ಗೊತ್ತಿದ್ದರೂ ಸಹ ನೀವು ಸದರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಮ್ಮ ಹೆಸರನ್ನು ಕಾನೂನು ವಿರುದ್ದವಾಗಿ ನಮೂದು

ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯವರು ಕೇವಲ ಶ್ರೀಕಾಂತ ಅವರ ಹೆಸರಿನಲ್ಲಿ ಮಾಡಿದ ಆದೇಶ ನಿಮ್ಮ ಪ್ರಕಾರ ತಪ್ಪು ಇದೆ ಎಂದು ನೀವು ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ಆ ರೀತಿ ಮೇಲ್ಮನವಿ ಸಲ್ಲಿಸಿದ ಬಗ್ಗೆ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

8. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನೀವು ಮಾನ್ಯ ಪ್ರಧಾನ ಸಿವ್ವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 123/2016 ರಂತೆ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿದ್ದೆ ಎಂದು ಹೇಳುತ್ತಾರೆ. ನೀವು ಸದರಿ ದಾವೆಯಲ್ಲಿ ನಿಮ್ಮ ಮತ್ತು 1 ಮತ್ತು 2 ನೇ ಪ್ರತಿವಾದಿಯವರ ನಡುವೆ ನ್ಯಾಯಾಲಯದ ಹೊರಗಡೆ ರಾಜೀ ಆಗಿದೆ ಎಂದು ಮೆಮೋ ಸಲ್ಲಿಸಿ ದಾವೆಯನ್ನು ಹಿಂಪಡೆದಿದ್ದೀರಾ ಎಂದರೆ ಹಿಂಪಡೆದಿದ್ದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಆದರೆ ಮಾತುಕತೆಯಂತೆ ನಮಗೆ ಆಸ್ತಿ ನೀಡದ ಕಾರಣ ಮತ್ತೆ ಈ ದಾವೆ ಸಲ್ಲಿಸಿದೆ ಎಂದು ಹೇಳುತ್ತಾರೆ. ನೀವು ವಿಭಾಗ ಆಗಿದ್ದರೂ ಸಹ ವಿಭಾಗ ಆಗಿಲ್ಲ ಎಂದು ದಾವೆ ಸಲ್ಲಿಸಿದ್ದನ್ನು ಹಿಂಪಡೆಯಬೇಕು ಎಂದು ಕಾಡರಕೊಪ್ಪ ಗ್ರಾಮದ ಹಿರಿಯರು ಹಿಂಪಡೆಯಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.39/3 ರ ಆಸ್ತಿಯಲ್ಲಿನ ನಿಮ್ಮ ಹೆಸರನ್ನು ಹಿಂದೆ ತೆಗೆದುಕೊಳ್ಳುತ್ತೀರಿ ಎಂದು ನೀವು ಅಸಲು ದಾವಾ ಸಂಖ್ಯೆ 123/2016 ರ ಮಾತುಕತೆಯಲ್ಲಿ ಒಪ್ಪಿಕೊಂಡಿದ್ದು, ಈಗ ಮತ್ತೆ ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

9. 1 ನೇ ಪ್ರತಿವಾದಿಯು ಸರ್ವೆ ನಂ.64/3 ರಲ್ಲಿನ ಉಳಿದ ಆಸ್ತಿಯನ್ನು 3 ನೇ ಪ್ರತಿವಾದಿಯ ಗಂಡನ ಸಹೋದರನ ಹೆಂಡತಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿ. ಊರಿನಲ್ಲಿನ ಹಿರಿಯರು 3 ನೇ ಪ್ರತಿವಾದಿ ರಾಧಾ ಅವರ ವಿರುದ್ಧ ಸಲ್ಲಿಸಿದ ದಾವೆಯನ್ನು ಹಿಂಪಡೆಯಲು ತಿಳಿಸಿ ಹೇಳಿದ್ದು ಅದರಂತೆ ನೀವು ದಿಃ03.09.2024 ರಂದು 3 ನೇ ಪ್ರತಿವಾದಿಗೆ ಸಂಬಂಧಿಸಿದಂತೆ ದಾವೆಯನ್ನು ಹಿಂಪಡೆದಿದ್ದೀರಿ ಎಂದರೆ ಸರಿ. ನೀವು 1 ನೇ ಪ್ರತಿವಾದಿಗೆ ಯಾವುದೇ ಸಕಾರಣವಿಲ್ಲದೇ ತೊಂದರೆ ಕೊಡುವ ಉದ್ದೇಶದಿಂದ ದಾವೆಗಳನ್ನು ಸಲ್ಲಿಸುತ್ತಾ ಬಂದಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ನಂ.39/3 ರ ಆಸ್ತಿ ಶ್ರೀಕಾಂತ 1 ನೇ ಪ್ರತಿವಾದಿಯ ಮಾಲೀಕತ್ವದ ಆಸ್ತಿ ಇದ್ದು, ಅದರಲ್ಲಿ ನಿಮಗೆ ಅಥವಾ ಬೇರೆ ಯಾರಿಗೂ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನೀವು 1 ನೇ ಪ್ರತಿವಾದಿಯ ಸರ್ವೆ ನಂ.39/3 ರ ಸ್ವಾಧೀನಾನುಭವಕ್ಕೆ ತೊಂದರೆ ಕೊಡುತ್ತಿದ್ದೀರಿ ಎಂದು 1 ನೇ ಪ್ರತಿವಾದಿ ಈ ಪ್ರಕರಣದಲ್ಲಿ ಕೌಂಟರ

ಕ್ಲೇಮ ಸಲ್ಲಿಸಿದ್ದಾನೆ ಎಂದರೆ ನಾನು ಯಾವುದೇ ತೊಂದರೆ ನೀಡಿಲ್ಲ ಎಂದು ಹೇಳುತ್ತಾರೆ. ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ